ಕವಿತೆ



ಕೆ. ಷರೀಫಾ

ಕಲೆ: ಎಸ್.ವಿ. ಹೂಗಾರ್



# ಶಾಂತಿ ಬೀಜದ ಸಾಂತ್ವನ



ಮರಳುಗಾಡಿನಲಿ ಒಬ್ಬಂಟಿ ನಿಂತಾಗ
ನನ್ನ ನೆರಳೇ ನನಗೆ ಸಾಂತ್ವನ ನೀಡುತ್ತದೆ.
ಪಂಜಿನ ಮೆರವಣಿಗೆಗೆ ಹೊರಟಿದ್ದ ಕಾಲುಗಳು
ಅರಿವಿನ ಬೆಳದಿಂಗಳ ಹಾದಿಯಲಿ ಸಾಗಿದ್ದವು.

ಕಾಲಚಕ್ರದ ಉರುಳು ನಿರಂತರ ಅರಿವಿಲ್ಲ
ನಿಗಿನಿಗಿ ಕೆಂಡಗಳ ಹೊಂಡ ಹಾಯುತ್ತಿತ್ತು.
ಹಸಿದಿರುವ ನೆಲಕ್ಕೆ ನೆತ್ತರು ಬಸಿಯುತ್ತಿತ್ತು
ಪ್ರೀತಿಯ ಬೀಜ ಮೊಳೆಯುವ ಆಸೆಯಿತ್ತು.

ಹುಣಸೆ ಮರದಲಿ ನೋಟು ಚಿಗುರುವುದಿಲ್ಲ
ಬಾಂಬು ಬೆಳೆಯಲಾಗದು ಭತ್ತದ ಸಸಿಯಲ್ಲಿ
ಗುಲಾಬಿ ಗಿಡದಿಂದ ನೆತ್ತರು ಒಸರುತ್ತಿದ್ದರೂ
ಬಿಳಿಯ ಪಾರಿವಾಳ ಶಾಂತಿ ಬೀಜ ಬಿತ್ತುತ್ತಿತ್ತು.

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68